# ಉದಯವಾಣಿ

ಜನಮನದ ಜೀವನಾಡಿ


▶ ಕರ್ನಾಟಕಕ್ಕೆ ಪ್ರಸ್ತಾವನೆ ಸಲ್ಲಿಸಲು ರೈಲ್ವೆ ಇಲಾಖೆಗೆ ಅನುಮತಿ

# ಹುಬ್ಬಳ್ಳಿ-ಅಂಕೋಲಾ ರೈಲಿಗೆ ನ್ಯಾಯಾಧಿಕರಣ ಗ್ರೀನ್ ಸಿಗ್ನಲ್

- ಪ್ರಸ್ತಾವವನ್ನು ಕೇಂದ್ರ ಪರಿಸರ ಇಲಾಖೆಗೆ ಸಲ್ಲಿಸಲು ಅವಕಾಶ
- ಪರಿಸರ ಸಚಿವಾಲಯವೂ ಒಪ್ಪಿದರೆ ಯೋಜನೆ ಜಾರಿ ಖಚಿತ

**168 ಕಿ.ಮೀ:** ಉದ್ದವಿರುವ ಪ್ರಸ್ತಾವಿತ ರೈಲು ಮಾರ್ಗವಿದು

**965 ಹೆಕ್ಟೇರ್:** ಅರಣ್ಯ ಪ್ರದೇಶ ಈ ರೈಲು ಮಾರ್ಗಕ್ಕೆ ಬಳಕೆ

**1998ರಲ್ಲಿ:** ಯೋಜನೆ ಪ್ರಕಟ, 2000ರಲ್ಲಿ ಅಟಲ್‌ರಿಂದ ಶಂಕುಸ್ಥಾಪನೆ

ನವದೆಹಲಿ: ಕರ್ನಾಟಕದ ಮಹತ್ವದ ರೈಲ್ವೆ ಯೋಜನೆಯಾದ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ಯೋಜನೆ ಕತೆ ಮುಗಿದೇ ಹೋಯಿತು ಎನ್ನುತ್ತಿರುವಾಗಲೇ ಹೊಸ ಆಶಾಕಿರಣ ಗೋಚರಿಸಿದೆ. ಯೋಜನೆ ಕುರಿತಂತೆ ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದು ಎಂದು ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು ರೈಲ್ವೆ ಇಲಾಖೆಗೆ ಅನುಮತಿ ನೀಡಿದೆ.

ಕಳೆದ ವರ್ಷ ಸುಪ್ರೀಂ ಕೋರ್ಟ್ ನೇಮಿತ ಉನ್ನತಾಧಿಕಾರ ಸಮಿತಿಯು (ಸಿಇಸಿ) 168 ಕಿ.ಮೀ. ದೂರದ ಈ ಯೋಜನೆಯು ಪರಿಸರಕ್ಕೆ ಮಾರಕ ಎಂದು ಅಭಿಪ್ರಾಯಪಟ್ಟು ಅನುಮತಿ ನಿರಾಕರಿಸಿತ್ತು ▶ 13ನೇ ಪುಟಕ್ಕೆ

## ಏನಿದರ ಲಾಭ?

ಬಳ್ಳಾರಿ, ಹೊಸಪೇಟೆ ಭಾಗದಲ್ಲಿನ ಗಣಿಗಳಿಂದ ಕಬ್ಬಿಣದ ಅದಿರಿನ ಭಾರಿ ಪ್ರಮಾಣದ ಗಣಿಗಾರಿಕೆ ನಡೆಯುತ್ತದೆ. ಈ ಅದಿರನ್ನು ಬಳ್ಳಾರಿಯಿಂದ, ಬೃಹತ್ ಬಂದರುಗಳು ಇರುವ ಕರಾವಳಿಗೆ ಸುಲಭವಾಗಿ ಸಾಗಿಸುವ ಸಲುವಾಗಿ ಹುಬ್ಬಳ್ಳಿ-ಅಂಕೋಲಾ ರೈಲ್ವೆ ಯೋಜನೆ ಪ್ರಸ್ತಾಪ ಇದೆ. ಜಂಟಿ ಸಹಭಾಗಿತ್ವದಲ್ಲಿ, ರೈಲು ಮಾರ್ಗ ನಿರ್ಮಿಸಲು ರೈಲ್ವೆ ಇಲಾಖೆ ಹಾಗೂ ಕರ್ನಾಟಕ ಸರ್ಕಾರ ನಿರ್ಧರಿಸಿದ್ದವು.

# ಹುಬ್ಬಳ್ಳಿ-ಅಂಕೋಲಾ ರೈಲಿಗೆ ನ್ಯಾಯಾಧಿಕರಣ ಗ್ರೀನ್‌ಸಿಗ್ನಲ್

1ನೇ ಪುಟದಿಂದ ▶ ಈ ಹಿನ್ನೆಲೆಯಲ್ಲಿ ಹಸಿರು ನ್ಯಾಯಾಧಿಕರಣ ನೀಡಿರುವ ಈ ತೀರ್ಪಿಗೆ ಮಹತ್ವ ಬಂದಿದೆ. ಯೋಜನೆಗೆ 965 ಹೆಕ್ಟೇರ್ ಅರಣ್ಯ ಜಮೀನು ಬೇಕಾಗಿದ್ದು, ಇದು ಧಾರವಾಡ, ಯಲ್ಲಾಪುರ ಮತ್ತು ಕಾರವಾರ ಅರಣ್ಯ ವಲಯಕ್ಕೆ ಸಂಬಂಧಿಸಿದ ಪ್ರದೇಶಗಳಾಗಿವೆ. ಈ ಭೂಮಿಯನ್ನು ಅರಣ್ಯೇತರ ಜಮೀನೆಂದು ಪರಿವರ್ತಿಸಬೇಕಾಗಿದೆ. ಇದು ಕಗ್ಗಂಟಿನ ವಿಷಯವಾಗಿದೆ.

ಈ ಸಂಬಂಧ ತನ್ನ ತೀರ್ಪು ನೀಡಿರುವ ಹಸಿರು ನ್ಯಾಯಾಧಿಕರಣ, 'ಯೋಜನೆಯ ಪ್ರತಿಪಾದಕವಾದ ರೈಲ್ವೆ ಇಲಾಖೆಗೆ, ಅರಣ್ಯ ಜಮೀನನ್ನು ಅರಣ್ಯೇತರ ಜಮೀನೆಂದು ಪರಿವರ್ತಿಸಿಕೊಡಿ ಎಂದು ಕೇಳುವ ಎಲ್ಲ ಅಧಿಕಾರವಿದೆ. ಈ ಪ್ರಸ್ತಾವನೆ ಬಂದರೆ ರಾಜ್ಯ ಸರ್ಕಾರವು ಕಾನೂನು ಪ್ರಕಾರ ಕ್ರಮ ಜರುಗಿಸಬೇಕು' ಎಂದು ಹೇಳಿದೆ.

'ಅರಣ್ಯ ಸಂರಕ್ಷಣಾ ಕಾಯ್ದೆ-1980ರ ಸೆಕ್ಷನ್-2 ಅನುಸಾರ ರಾಜ್ಯ ಸರ್ಕಾರವು ಕೇಂದ್ರ ಪರಿಸರ ಸಚಿವಾಲಯದ ಅನುಮತಿ ಪಡೆದುಕೊಂಡು ಅರಣ್ಯ ಭೂಮಿ ಪರಿವರ್ತನೆಗೆ ಅನುಮೋದನೆ ನೀಡಬಹುದು. ಸಿಇಸಿಯು ಯೋಜನೆಗೆ ಅನುಮತಿ ನಿರಾಕರಿಸಿ, ರೈಲ್ವೆ ಇಲಾಖೆಗೆ ಇರುವ ಅಧಿಕಾರ ತಳ್ಳಿಹಾಕಲಾಗದು. ಅರಣ್ಯ ಕಾಯ್ದೆಯ ಸೆಕ್ಷನ್-2 ಅನುಸಾರ ಇಂಥ ಅನುಮೋದನೆ ನೀಡಲಾಗದು ಎಂದು ಸಿಇಸಿ ತಿಳಿಸದೆಯಷ್ಟೇ' ಎಂದು ಹಸಿರು ನ್ಯಾಯಾಧಿಕರಣದ ಅಧ್ಯಕ್ಷ ನ್ಯಾ। ಸ್ವತಂತ್ರಕುಮಾರ್ ಅವರ ನೇತೃತ್ವದ ಪೀಠ ತಿಳಿಸಿದೆ.

'ಈ ವಿಷಯದಲ್ಲಿ ಪಶ್ಚಿಮ ಘಟ್ಟಕ್ಕೆ ಹಾನಿಯಾಗ ಬಾರದು ಎಂಬ ಕಳಕಳಿ ಇದೆ. ಇಂಥ ಸಂದರ್ಭದಲ್ಲಿ ಅರ್ಜಿಗಳನ್ನು ಪೀಠವು ಇತ್ಯರ್ಥಪಡಿಸುತ್ತಿದ್ದು, ಅರಣ್ಯ ಭೂಪರಿವರ್ತನೆ ಕೋರಿ ರೈಲ್ವೆ ಇಲಾಖೆಯು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬಹುದು' ಎಂದು ನ್ಯಾಯಾಧಿಕರಣ ಆದೇಶಿಸಿದೆ.

2006ರಲ್ಲಿ ಕರ್ನಾಟಕದ ಪರಿಸರ ಸಂರಕ್ಷಣ ಸಮಿತಿ ಮತ್ತು ವೈಲ್ಡರ್‌ನೆಸ್ ಕ್ಲಬ್ ಎಂಬ 2 ಸಂಘಟನೆಗಳು ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ನಿರ್ಮಾಣ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದವು. ನಂತರ ಸುಪ್ರೀಂ ಕೋರ್ಟ್‌ನಿಂದ ಯೋಜನೆಗೆ ತಡೆಯಾಜ್ಞೆ ಸಿಕ್ಕಿತ್ತು. ಆದರೆ ಕಳೆದ ಅ.5ರಂದು ಅರ್ಜಿಗಳ ಗುಚ್ಛಗಳನ್ನು ಮತ್ತು ಸಿಇಸಿ ಅಭಿಪ್ರಾಯಗಳನ್ನು ಪರಿಶೀಲಿಸುವಂತೆ ಹಸಿರು ನ್ಯಾಯಾಧಿಕರಣಕ್ಕೆಸುಪ್ರೀಂಕೋರ್ಟು ಸೂಚಿಸಿತ್ತು. ಅಲ್ಲದೆ, ತ್ವರಿತ ವಿಚಾರಣೆಗೂ ಆದೇಶಿಸಿತ್ತು.

ನ್ಯಾಯಾಧಿಕರಣದಲ್ಲಿ ವಾದ ಮಂಡಿಸಿದ ಕೇಂದ್ರ ಪರಿಸರ ಸಚಿವಾಲಯದ ವಕೀಲರು, 'ಅರಣ್ಯ ಪರಿವರ್ತನೆಗೆ ಅನುಮೋದನೆ ಕೋರಿ ರಾಜ್ಯ ಸರ್ಕಾರದಿಂದ ಯಾವುದೇ ಅಧಿಕೃತ ಕೋರಿಕೆಯೇ ಬಂದಿಲ್ಲ. ಹೀಗಾಗಿ ಈ ಹಂತದಲ್ಲಿ ಯೋಜನೆಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸುವುದರಲ್ಲಿ ಯಾವುದೇ ಅರ್ಥವಿಲ್ಲ' ಎಂದಿತು. ಇದನ್ನು ಪರಿಗಣಿಸಿದ ಹಸಿರು ಪೀಠ, ರೈಲ್ವೆ ಸಚಿವಾಲಯದಿಂದ ಪ್ರಸ್ತಾಪ ಬಂದರೆ ಕೇಂದ್ರ ಅರಣ್ಯ ಸಚಿವಾಲಯಕ್ಕೆ ರಾಜ್ಯ ಸರ್ಕಾರ ಅನುಮತಿ ಕೋರಬೇಕು ಎಂದಿತು.

## ಯೋಜನೆಯ ಟೈಮ್‌ಲೈನ್

**2000**
ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರಿಂದ ಹುಬ್ಬಳ್ಳಿ-ಅಂಕೋಲಾ ಮಾರ್ಗಕ್ಕೆ ಶಂಕುಸ್ಥಾಪನೆ

**2004**
ಕೇಂದ್ರ ಪರಿಸರ ಸಚಿವಾಲಯದಿಂದ ಯೋಜನಾ ಪ್ರಸ್ತಾವ ತಿರಸ್ಕಾರ

**2005**
ರೈಲ್ವೆ ಇಲಾಖೆ ಪರಿಷ್ಕೃತ ಪ್ರಸ್ತಾವ, ಯೋಜನೆಗೆ ಬೇಕಾದ ಅರಣ್ಯ ಭೂಮಿಯ ಪ್ರಮಾಣ 965ರಿಂದ 720 ಹೆಕ್ಟೇರ್‌ಗೆ ಇಳಿಕೆ

**2006**
ಯೋಜನೆಯಿಂದ ಪರಿಸರಕ್ಕೆ ಹಾನಿ ಎಂದು ಕೆಲ ಪರಿಸರ ಸಂಘಟನೆಗಳು ಸುಪ್ರೀಂ ಕೋರ್ಟ್‌ಗೆ

**2008**
ಕರಾವಳಿ ಹಾಗೂ ಇತರ ಭಾಗದ ಮಧ್ಯ ಸಂಪರ್ಕ ಕಲ್ಪಿಸಲು ಪಶ್ಚಿಮ ಘಟ್ಟ ಬಳಕೆ ಅನಿವಾರ್ಯ: ಕರ್ನಾಟಕ ಸರ್ಕಾರ ಪ್ರತಿಪಾದನೆ

**2015**
ಸುಪ್ರೀಂ ಕೋರ್ಟ್ ನಿಯೋಜಿತ ಸಿಇಸಿಯಿಂದ ಯೋಜನೆ ತಿರಸ್ಕಾರ, ಬಳಿಕ ಅರ್ಜಿಗಳ ಮತ್ತು ಸಿಇಸಿ ಶಿಫಾರಸಿನ ಕುರಿತು ತ್ವರಿತ ವಿಚಾರಣೆ ನಡೆಸಲು ಹಸಿರು ನ್ಯಾಯಾಧಿಕರಣಕ್ಕೆ ಸುಪ್ರೀಂ ಕೋರ್ಟ್ ಸೂಚನೆ

**2016**
ಯೋಜನೆಗೆ ಹೊಸ ಪ್ರಸ್ತಾವವನ್ನು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸುವಂತೆ ಹಸಿರು ನ್ಯಾಯಾಧಿಕರಣದಿಂದ ರೈಲ್ವೆ ಇಲಾಖೆಗೆ ಆದೇಶ

## ಯೋಜನೆಯ ಸ್ವರೂಪವೇನು?

**ಈ** ಯೋಜನೆಗೆ 2000ನೇ ಇಸ್ವಿಯ ಮೇನಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಶಂಕುಸ್ಥಾಪನೆ ನೆರವೇರಿಸಿದ್ದರು. 329 ಸೇತುವೆ, 29 ಸುರಂಗ ನಿರ್ಮಾಣವನ್ನು ಒಳಗೊಂಡಿರುವ ಈ ಯೋಜನೆಗಾಗಿ ಮೊದಲು 965 ಹೆಕ್ಟೇರ್ ಅರಣ್ಯ ಪ್ರದೇಶ ಬೇಕಿತ್ತು. ಆದರೆ, ಪರಿಷ್ಕೃತ ಬೇಡಿಕೆಯ ಪ್ರಕಾರ 727 ಹೆಕ್ಟೇರ್ ಸಾಕು. ಯೋಜನೆಯ ಅಂದಾಜು ವೆಚ್ಚ 2315 ಕೋಟಿ ರೂಪಾಯಿ. ಆದರೆ, ಇದಕ್ಕೆ ಬೇಕಾದ ಪರಿಷ್ಕೃತ ಯೋಜನೆಯ 727 ಹೆಕ್ಟೇರ್ ಅರಣ್ಯದ ಈಗಿನ ಮಾರುಕಟ್ಟೆ ಮೌಲ್ಯ 7426 ಕೋಟಿ ರೂಪಾಯಿ. ಅಂದರೆ ಯೋಜನಾ ವೆಚ್ಚದ ಒಟ್ಟು ಮೂರು ಪಟ್ಟು ಹೆಚ್ಚು ಮೌಲ್ಯವನ್ನು ಈ ಭೂಮಿ ಹೊಂದಿದೆ.

## ಸಿಇಸಿ ನಕಾರ ಏಕೆ?

**ಈ** ಯೋಜನೆಯಿಂದ ಪರಿಸರದ ಮೇಲೆ ಅಗಾಧ ಹಾಗೂ ಸರಿಪಡಿಸಲಾಗದಷ್ಟು ಪರಿಣಾಮ ಉಂಟಾಗುತ್ತದೆ. ಲಾಭಕ್ಕಿಂತ ಈ ಯೋಜನೆಯಿಂದ ಆಗುವ ನಷ್ಟವೇ ಹೆಚ್ಚು ಎಂದು ಸುಪ್ರೀಂಕೋರ್ಟ್ ನೇಮಿತ ಸಿಇಸಿ ಕಳೆದ ವರ್ಷ ಸುಪ್ರೀಂ ಕೋರ್ಟ್‌ಗೆ ಶಿಫಾರಸು ಸಲ್ಲಿಸಿತ್ತು. ಯೋಜನೆಗೆ 2.5 ಲಕ್ಷ ಮರಗಳನ್ನು ಕಡಿಯಬೇಕಾಗಿದೆ. ಪರ್ಯಾಯ ಮಾರ್ಗಗಳೇ ಅದಿರು ಸಾಗಣೆಗೆ ಸಂಪೂರ್ಣವಾಗಿ ಬಳಕೆಯಾಗಿಲ್ಲ. ಅದೂ ಅಲ್ಲದೆ 20 ವರ್ಷಗಳ ನಂತರ ಬಳ್ಳಾರಿ- ಹೊಸಪೇಟೆ ಭಾಗದಲ್ಲಿನ ಅದಿರೇ ಖಾಲಿಯಾಗುತ್ತದೆ. ಹೀಗಾಗಿ ಹುಬ್ಬಳ್ಳಿ-ಅಂಕೋಲಾ ಮಾರ್ಗ ನಿರರ್ಥಕ ಎಂದು ಹೇಳಿತ್ತು.

## ಶೀಘ್ರ ಪ್ರಸ್ತಾವ ಕಳಿಸಿ

ನ್ಯಾಯಾಧಿಕರಣದ ಸೂಚನೆಯಂತೆ ಕರ್ನಾಟಕ ಸರ್ಕಾರಕ್ಕೆ ಯೋಜನೆಗೆ ಬೇಕಾದ 965 ಹೆಕ್ಟೇರ್ ಅರಣ್ಯ ಭೂಮಿಗೆ ಕೋರಿ ತಕ್ಷಣವೇ ಪ್ರಸ್ತಾವ ಕಳಿಸುವಂತೆ ನೈರುತ್ಯ ರೈಲ್ವೆಗೆ ನಾವು ಆಗ್ರಹಿಸುತ್ತೇವೆ. ಇದಕ್ಕೆ ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಪರಿಸರ ಸಚಿವಾಲಯಗಳ ಸ್ಪಂದಿಸಿದರೆ ಯೋಜನೆಗೆ ಇರುವ ಎಲ್ಲ ಅಡೆತಡೆಗಳು ನಿವಾರಣೆಯಾಗಲಿವೆ.

• ಪ್ರಹ್ಲಾದ ಜೋಶಿ, ಧಾರವಾಡ ಸಂಸದ